
ಸಮೂಹದಿಂದ ಹೊರಬಿದ್ದ ಮೀನು

ಎವ್ಲೆಲಿನ್ ಶಾ
ಚಿತ್ರಗಳು ರಾಲ್ಫ್ ಕಾರ್ಪೆಂಟರ್





ಸಮೂಹದಿಂದ ಹೊರಬಿದ್ದ ಮೀನು

ಎವ್ಲಿನ್ ಶಾ
ಚಿತ್ರಗಳು ರಾಲ್ಫ್ ಕಾರ್ಪೆಂಟರ್

ಕನ್ನಡಕ್ಕೆ ಪ್ರಭಾಕರ ನಾನಾವಟಿ











ಸೂರ್ಯನು ಮುಳುಗಿದ್ದನು.
ರಾತ್ರಿಯಾಗುತ್ತಲಿತ್ತು.
ಸಮುದ್ರದಲ್ಲಿ, ಹೆರಿಂಗ್
ಮೀನುಗಳು ಬಹಳ ನಿಧಾನವಾಗಿ
ಈಜುತ್ತಿದ್ದವು.
ಶಾಲೆಗೆ ಹೋಗುವ ಮಕ್ಕಳಂತೆ
ಅವು ಸಮೂಹದಲ್ಲಿ
ಈಜುತ್ತಿದ್ದವು.

ಕತ್ತಲೆ ಆದ್ದರಿಂದ ಮೀನುಗಳು ಈಜುವದನ್ನು ನಿಲ್ಲಿಸತೊಡಗಿದವು. ಸಮುದ್ರದ ತಳದಲ್ಲಿರುವ ಉಸುಕಿನ ಮೇಲೆ ಅವು ಮಲಗತೊಡಗಿದವು. ಆದರೆ ಮನುಷ್ಯರಂತೆ ಅವು ಮಲಗುವದಿಲ್ಲ.

ಅವುಗಳಿಗೆ ಕಣ್ಣುರೆಪ್ಪೆಗಳಿಲ್ಲ. ಆದ್ದರಿಂದ ಅವು ಕಣ್ಣು ಮುಚ್ಚಲಾರವು. ಅವು ಮಲಗಿದಾಗ ಇನ್ನೊಂದು ಮೀನನ್ನು ನೋಡುತ್ತಿರುವಂತೆ ಕಾಣುವದು. ಇಡೀ ರಾತ್ರಿ ಎಲ್ಲ ಹೆರಿಂಗ ಮೀನುಗಳು ಮಲಗಿದವು.



ಸೂರ್ಯೋದಯ ಆಗತೊಡಗಿತು. ಸಮುದ್ರದ ತಳದವರೆಗೆ ಪ್ರಕಾಶ ಕಿರಣಗಳು ಕಾಣತೊಡಗಿದವು. ಮೀನುಗಳಿಗೆ ಎಚ್ಚರವಾಯಿತು. ಅವು ಚಲಿಸತೊಡಗಿದವು. ಹೆರಿಂಗ ಮೀನುಗಳು ಶಾಲೆಗೆ ಹೋಗುವ ಮಕ್ಕಳಂತೆ ರಚನೆ ಮಾಡಿದವು.ಅವು ಸಮುದ್ರದ ಮರಳಿನ ಮೇಲೆ ಈಜತೊಡಗಿದವು. ಆದರೆ ಅವುಗಳಲ್ಲಿಯ ಒಂದು ಹೆರಿಂಗ ಮೀನು ಇನ್ನೂ ಮಲಗಿಕೊಂಡಿತ್ತು. ಅದಕ್ಕೆ ಎಚ್ಚರವಾದಾಗ ಇಡೀ ಸಮೂಹ ಹೊರಟು ಹೋಗಿತ್ತು.




ಅದು ಎಡಕ್ಕೆ ನೋಡಿತು.
ಬಲಕ್ಕೆ ನೋಡಿತು.
ಆದರೆ ಅದೀಗ ಒಬ್ಬಂಟಿಗ.



ತನ್ನ ಇಡೀ ಆಯುಷ್ಯವೆಲ್ಲ ಉಳಿದ ಹೆರಿಂಗ ಮೀನುಗಳ ಜತೆ ಅದು ಇರುತ್ತಿತ್ತು. ಮೊಟ್ಟೆಯಿಂದ ಹೊರಬಿದ್ದಾಗಿನಿಂದಲೇ ಅವು ಜೊತೆಯಲ್ಲಿರುತ್ತಿದ್ದವು. ಆಗ ಅವು ಅರ್ಧ ಅಂಗುಲದಷ್ಟಿದ್ದವು. ಈಗ ಅವು ಒಂದು ವರುಷದವು. ಅವುಗಳ ಉದ್ದ ನಾಲ್ಕು ಅಂಗುಲ. ಎಲ್ಲ ಮೀನುಗಳು ಅದರಂತೆಯೇ ಕಾಣುತ್ತಿದ್ದವು. ಅವೆಲ್ಲ ಒಂದೇ ಜಾತಿಯವು.ಅವುಗಳ ಆಕಾರ ಮತ್ತು ವಯಸ್ಸು ಒಂದೇ ರೀತಿಯವು.


ಈ ಚಿಕ್ಕ ಹೆರಿಂಗ ಮೀನು
ತನ್ನ ಸಮೂಹದ
ಹೊರಗಿದ್ದರೆ
ಸುರಕ್ಷಿತವಾಗಿರಲಾರದು




ಅದು ಸುತ್ತಮುತ್ತಲು
ನೋಡತೊಡಗಿತು. ಅದು
ರಭಸದಿಂದ ಮೇಲೆ ಕೆಳಗೆ
ಈಜತೊಡಗಿತು. ಆದರೆ ತನ್ನ
ಸಮೂಹ ಕಾಣಲಿಲ್ಲ. ಅದಕ್ಕೆ
ಹಸಿವೆ ಆಗಿತ್ತು. ಹಸಿವೆಯಾದಾಗ
ಸಮೂಹವು ಆಹಾರ ಹುಡುಕಲು
ಎಷ್ಟೋ ಸಲ ಹವಳದ
ಬಂಡೆಹತ್ತಿರ ಹೋಗುತ್ತಿತ್ತು. ಈ
ಚಿಕ್ಕ ಮೀನು ಕೂಡ ಹವಳದ
ಬಂಡೆ ಎಡೆ ಈಜತೊಡಗಿತು.
ಆದರ ಬಾಲವು ಎಡಕ್ಕೆ ಬಲಕ್ಕೆ
ಹೊರಳುತ್ತಿತ್ತು.

ಅದಕ್ಕೆ ದಣಿವಾಗಿತ್ತು ಮತ್ತು ಹಸಿವೆಯಾಗಿತ್ತು. ಅದಕ್ಕೆ ಚಿಕ್ಕ ಪ್ರಾಣಿಗಳು ಮತ್ತು ಪ್ಲಾಂಕಟನ್ ಸಸ್ಯಗಳು ಕಂಡವು. ಈ ಸಸ್ಯಗಳು ಸಮುದ್ರ್ರದ ನೀರಿನಲ್ಲಿ ತೇಲುತ್ತವೆ. ಮೀನು ಬಾಯಿ ತೆರೆದು ಆ ಸಸ್ಯಗಳಲ್ಲಿಯ ಕೆಲವನ್ನು ತಿನ್ನತೊಡಗಿತು.

ಅದು ಸುತ್ತಮುತ್ತಲು ತಿರುಗತೊಡಗಿತು. ಮತ್ತಷ್ಟು ಸಸ್ಯಗಳನ್ನು ತಿನ್ನತೊಡಗಿತು. ಅದರ ಹೊಟ್ಟೆ ತುಂಬಿತು.






ಅದು ಹವಳದ ಬಂಡೆಯ ಕಡೆಗೆ
ರಭಸದಿಂದ ಈಜತೊಡಗಿತು.
ಸ್ವಚ್ಛ ನೀಲಿ ಬಣ್ಣದ ಸಮುದ್ರದ
ನೀರಿನಲ್ಲಿ ಅದಕ್ಕೆ ಸಮುದ್ರಬೀಸಣಿಕೆ
ಮತ್ತು ಹವಳಗಳು ಕಾಣುತ್ತಿದ್ದವು.




ಅದು ಪ್ರಾಣಿಗಳನ್ನು ನೋಡಿತು. ಅವೆಲ್ಲ ದಾರದಂತೆ ಕಾಣುತ್ತಿದ್ದವು. ಅವು ನೀರಿನಲ್ಲಿ ಹಿಂದೆ ಮುಂದೆ ಚಲಿಸುತ್ತಿದ್ದವು.ಅದು ಮೈಮೇಲೆ ಉದ್ದವಾದ ಕಪ್ಪು ಮುಳ್ಳುಗಳಿರುವ ಪ್ರಾಣಿಗಳನ್ನು ನೋಡಿತು. ಅವು ಸಮುದ್ರದ ಅರ್ಚಿನ್ ಗಳು.






ಒಂದು ಹಾವುಮೀನು ತನ್ನ ಹುತ್ತಿನಿಂದ ಕುತ್ತಿಗೆಯನ್ನು ಹೊರತೆರೆಯುತ್ತಿತ್ತು. ಅದಕ್ಕೆ ಚೂಪಾದ ಬಿಳಿ ಹಲ್ಲುಗಳಿದ್ದವು.



ಹವಳದಲ್ಲಿಯ ಚಿಕ್ಕ
ರಂಧ್ರಗಳಿಂದ ವಿವಿಧ
ಮೀನುಗಳು ಒಳ-ಹೊರಗೆ
ಮಾಡುತ್ತಿದ್ದವು.



ಅವು ಕೆಂಪು, ನೀಲಿ, ಅರಿಷಿಣ, ಕಪ್ಪು
ಬಣ್ಣದ್ದಿದ್ದವು. ಹವಳ
ಹೂದೋಟದಂತೆ ಕಾಣಿಸುತ್ತಿತ್ತು.
ನೇರಳೆ ಬಣ್ಣದ ಮೀನಿನ ತಲೆಯ
ಮೇಲೆ ಕೊಂಬುಗಳಿದ್ದವು.

ಈ ಮೀನುಗಳು ಅದರ ಗುಂಪಿನಲ್ಲಿ ಇರಲಿಲ್ಲ. ಅವುಗಳ ಬಣ್ಣ ಕೂಡ ಬೇರೆ ರೀತಿಯದಿತ್ತು. ಅವುಗಳ ವಾಸನೆ ಕೂಡ ಅದರ ಗುಂಪಿನ ಮೀನುಗಳಂತೆ ಇರಲಿಲ್ಲ. ಅವುಗಳ ಚಲನೆ ಕೂಡ ಹೊಂದುತ್ತಿರಲಿಲ್ಲ.
ಅದು ತನ್ನ ಈಜನ್ನು ಮುಂದುವರೆಸಿತು. ಹವಳದ ತೂತುಗಳಲ್ಲಿ ಹಣಿಕೆ ಹಾಕಿ ನೋಡತೊಡಗಿತು. ಮೈತುಂಬ ರೇಷೆಗಳಿರುವ ನೀಲಿ ಬಣ್ಣದ ಮೀನಿನ ಕಡೆ ಅದು ಈಜತೊಡಗಿತು.




ಈ ಮೀನನ್ನು ಸಾರ್ಜಂಟ್ ಮೇಜರ್ ಎಂದು ಕರೆಯುತ್ತಿದ್ದರು. ಇದು ಮೊಟ್ಟೆಗಳ ರಕ್ಷಣೆ ಮಾಡುತ್ತದೆ. ಉಳಿದ ಮೀನುಗಳು ಈ ಮೊಟ್ಟೆಗಳನ್ನು ತಿನ್ನಬಾರದೆಂದು ಅವುಗಳ ರಕ್ಷಣೆಯ ಹೊಣೆ ಇದರ ಮೇಲಿತ್ತು. ಹೆರಿಂಗ ಮೀನು ಈಜುತ್ತ ಅದರ ಹತ್ತಿರ ಹೋದಾಗ ಸಾರ್ಜಂಟ್ ಮೇಜರ್ ಸಿಟ್ಟಿನಲ್ಲಿ ಈಜುತ್ತ ಅದರ ಕಡೆಗೆ ಬಂದಿತು.





ಹೆರಿಂಗ ಮೀನು ಕೂಡಲೇ ದೂರ ಹೋಯಿತು. ಅದಕ್ಕೆ ಆಕ್ಟೋಪಸ್ ಕಾಣಿಸಿತು. ಆಕ್ಟೋಪಸ್ ಒಂದು ಬಂಡೆಯ ಕೆಳಗೆ ಕುಳಿತಿತ್ತು. ಅದರ ಎಂಟು ಕೈಗಳಲ್ಲಿಯ ಮೂರು ಕೈಗಳು ಹೊರಗೆ ಬಂದಿದ್ದವು. ಅದು ನಿಧಾನವಾಗಿ ಚಲಿಸುತ್ತಿತ್ತು. ಮೀನು ದೂರ ಹೋಯಿತು. ಬಂಡೆಯ ಬದಿಯಲ್ಲಿ ಒಂದು ಏಡಿ ಆಹಾರವನ್ನು ಹುಡುಕುತ್ತಿತ್ತು. ಅಷ್ಟರಲ್ಲಿ ಆಕ್ಟೋಪಸ್ ಒಮ್ಮೆಲೆ ನುಗ್ಗಿ ಕೈಗಳನ್ನು ಚಾಚಿತು. ಅದು ಏಡಿಯ ಮೇಲೆ ದಾಳಿ ಮಾಡಿ ಹಿಡಿಯಿತು. ಆಕ್ಟೋಪಸ್ ಅದನ್ನು ತಿನ್ನಬಹುದು. ಹೆರಿಂಗ ಮೀನು ಈಜುತ್ತ ದೂರ ಹೋಯಿತು.




ಹೆರಿಂಗ ಮೀನು ಒಂದು ಕಪ್ಪು ಪ್ರಾಣಿಯನ್ನು ದೂರದಿಂದ ನೋಡಿತು. ದೂರದಿಂದ ನೋಡಿದರೆ ಮೀನುಗಳ ಸಮೂಹ ಕೂಡ ಕಪ್ಪು ಪ್ರಾಣಿಯಂತೆ ಕಾಣುವದು. ಅದು ಹಸಿದಿದ್ದ ಮೀನನ್ನು ಹೆದರಿಸಬಹುದು.

ಆ ಚಿಕ್ಕ ಹೆರಿಂಗ ಮೀನು ಅದರಿಂದ ದೂರ ಹೋಗಲು ಈಜತೊಡಗಿತು. ಅದು ತನ್ನ ಸಮೂಹವನ್ನು ನೋಡಿತು. ಆದರೆ ಈ ಸಮೂಹವು ಈಗ ಅಪಾಯಕ್ಕೀಡಾಗಬಹುದು. ಏಕೆಂದರೆ ಅಲ್ಲಿಯೇ ನೀರಾವೆ ಈ ಸಮೂಹದ ಮೇಲೆ ದಾಳಿ ಇಡುವ ಯೋಚನೆಯಲ್ಲಿತ್ತು. ತನ್ನ ಕುತ್ತಿಗೆಯನ್ನು ಅದು ಹೊರಗೆ ತರುತ್ತಿತ್ತು.

ಅದು ಒಂದು
ಮೀನನ್ನು ಹಿಡಿಯಲು
ಪ್ರಯತ್ನಿಸುತ್ತಿತ್ತು.



ಮೀನನ್ನು ಹಿಡಿಯಲು ಅದು ತನ್ನ
ಕುತ್ತಿಗೆಯನ್ನು ಹೊರಚಾಚಿದಾಗ
ಮೀನು ತನ್ನ ದಿಕ್ಕನ್ನು ಬದಲಿಸಿ
ಈಜಾಡುತ್ತಿತ್ತು.





ಸಮೂಹದಲ್ಲಿದ್ದ ಮೀನುಗಳು ಎಲ್ಲ
ದಿಕ್ಕಿನಲ್ಲಿ ಈಜಾಡುತ್ತಿದ್ದವು. ಅವೆಲ್ಲ
ಹೊಳೆಯುತ್ತಿರುವ ಚಿಕ್ಕ ಮಿಂಚಿನಂತೆ
ಕಾಣುತ್ತಿದ್ದವು. ಆವೆ ಮೀನನ್ನು
ಹಿಡಿಯಲು ರಭಸದಿಂದ ಬಂತು.
ಆವೆಗೆ ಒಂದು ಮೀನು ಕೂಡ
ದೊರೆಯಲಿಲ್ಲ. ಸಮೂಹವು
ಆವೆಯಿಂದ ದೂರ
ಹೋಗತೊಡಗಿತು.



ಹೆರಿಂಗ ಮೀನು ಇದನ್ನೆಲ್ಲ ನೋಡುತ್ತಲಿತ್ತು. ತಾನು ಇಷ್ಟು ದಿನ ಕಳೆದ ಮೀನುಗಳ ಸಮೂಹಕ್ಕಿಂತ ಈ ಸಮೂಹ ಬೇರೆಯಾಗಿತ್ತು. ಅವೆಲ್ಲ ನೀಲಿ ಬಣ್ಣದ ಮೀನುಗಳು. ಅವುಗಳ ಗಾತ್ರ ಕೂಡ ದೊಡ್ಡದು. ಹೆರಿಂಗ ಮೀನು ಆ ಸಮೂಹದಲ್ಲಿ ಸೇರಲಿಲ್ಲ. ಅದು ಈಜುತ್ತ ಮುಂದೆ ಹೋಯಿತು. ಹವಳದ ಹತ್ತಿರ ಹೋಯಿತು. ಈ ವೇಳೆ ಹವಳದ ಇನ್ನೊಂದು ಬದಿಗೆ ಹೋಯಿತು. ಅಲ್ಲಿ ಬೆಳೆದ ಸಸ್ಯಗಳೆಲ್ಲ ಹುಲ್ಲಿನಂತೆ ಕಾಣುತ್ತಿದ್ದವು.






ಇನ್ನೊಂದು ಮೀನುಗಳ ಸಮೂಹ
ಸಮುದ್ರ ತಳದ ಮರಳಿನಲ್ಲಿ
ತಿನ್ನುತ್ತ ಈಜಾಡುತ್ತಿತ್ತು. ಹೆರಿಂಗ
ಮೀನು ಅದರ ಹತ್ತಿರ
ಹೋಯಿತು. ಒಮ್ಮೆಲೆ ಅದು
ನಿಂತಿತು. ಆ ಸಮೂಹದ
ಇನ್ನೊಂದು ಬದಿಯಲ್ಲಿ ಏನೋ
ಇತ್ತು.



ಅದು ಬರಾಕುಡಾ ಮೀನುಗಳ
ಜಾತಿಯದು. ಬರಾಕುಡಾ
ನಿಶ್ಚಲವಾಗಿ ತೇಲುತ್ತಿತ್ತು.
ತೇಲುತ್ತಿರುವ ಗಿಡದ ಕೊರಡಿನಂತೆ
ಅದು ಕಾಣುತ್ತಿತ್ತು. ಹೆರಿಂಗ
ಮೀನು ಹುಲ್ಲಿನ ಹಿಂಬದಿಗೆ
ಹೋಯಿತು.









ಬರಾಕುಡಾ ತನ್ನ ಬಾಯಿಯನ್ನು ಮೆಲ್ಲಗೆ ತೆರೆಯುತ್ತಿತ್ತು ಮತ್ತು ಮುಚ್ಚುತ್ತಿತ್ತು. ಅದರ ಹಲ್ಲುಗಳು ದವಡೆಯ ಹೊರಗಿನವರೆಗೆ ಬಂದಿದ್ದವು.


ಒಮ್ಮೆಲೆ ಬರಾಕುಡಾ ಈಜುತ್ತ ಸಮೂಹದಲ್ಲಿ ನುಗ್ಗಿತು.




ಎಲ್ಲ ಮೀನುಗಳು ಅಂಜಿದವು. ಅವು ಚೆಲ್ಲಾಪಿಲ್ಲಿಯಾಗಿ ಎಲ್ಲ ದಿಕ್ಕುಗಳಲ್ಲಿ ಈಜತೊಡಗಿದವು. ಒಂದು ಮೀನು ಬರಾಕುಡಾದ ಬಾಯಿ ಹತ್ತಿರವೇ ಈಜಾಡುತ್ತಿತ್ತು. ಬರಾಕುಡಾ ಬಾಯಿ ತೆರೆಯಿತು ಮತ್ತು ದವಡೆಗಳನ್ನು ಗಟ್ಟಿಯಾಗಿ ಮುಚ್ಚಿತು. ಅದು ಮೀನನ್ನು ನುಂಗಿಬಿಟ್ಟಿತು.




ಸಮೂಹ ಈಜಾಡುತ್ತ ಮುಂದೆ ಹೋಯಿತು. ಅದು ಹೆರಿಂಗ ಮೀನು ಅಡಗಿಕೊಂಡ ಹುಲ್ಲನ್ನು ದಾಟಿತು. ಈ ಮೀನುಗಳು ಅದರ ಸಮೂಹದಂತೆ ಕಾಣುತ್ತಿದ್ದವು.




ಅವುಗಳ ಬೆಳ್ಳಿ ಬಣ್ಣದ ತಲೆಯ ಮೇಲೆ ಕೆಂಪು ಬಣ್ಣದ ಸಣ್ಣ ಚುಕ್ಕೆ ಇತ್ತು. ಅವುಗಳ ಗಾತ್ರ ಹೆರಿಂಗ ಮೀನಿನಷ್ಟೇ ಇತ್ತು.




ಕೊನೆಗೊಮ್ಮೆ ಅದಕ್ಕೆ ತನ್ನ
ಹೆರಿಂಗ ಮೀನುಗಳ ಸಮೂಹ
ದೊರೆಯಿತು. ಅದು ಅವುಗಳ
ಜೊತೆ ಈಜಾಡತೊಡಗಿತು.



ಅದರ ಎರಡು ಬದಿಗಳಲ್ಲಿ
ಮೀನುಗಳಿದ್ದವು. ಅದರ ಮೇಲೆ
ಮೀನುಗಳಿದ್ದವು. ಅದರ ಹಿಂದೆ
ಮತ್ತು ಅದರ ಕೆಳಗೆ
ಮೀನುಗಳಿದ್ದವು.





ಯಾವ ಮೀನು ಕೂಡ ಒಬ್ಬರನ್ನು
ಬಿಟ್ಟು ದೂರ ಹೋಗುತ್ತಿರಲಿಲ್ಲ. ಅವು
ಬಹಳ ಸಮೀಪ ಕೂಡ ಬರುತ್ತಿರಲಿಲ್ಲ.
ಹೆರಿಂಗ ಮೀನಿಗೆ ತಾನು ಸರಿಯಾದ
ಸಮೂಹದಲ್ಲಿದ್ದದ್ದು ಖಾತ್ರಿಯಾಯಿತು.
ತನ್ನ ಸಮೂಹದಲ್ಲಿರುವದೇ ಒಳ್ಳೆಯದು
ಎಂಬುದರ ಅರಿವು ಅದಕ್ಕೆ ಆಯಿತು.


ಮೀನುಗಳ ಈ ಸಮೂಹ ಸೈನ್ಯದಲ್ಲಿಯ ಸೈನಿಕರ ಕವಾಯತಿನಂತೆ ಕಾಣುತ್ತಿತ್ತು. ಅವೆಲ್ಲವು ಒಂದೇ ದಿಕ್ಕಿನಲ್ಲಿ ಈಜುತ್ತಿದ್ದವು. ಅವು ಒಂದೇ ವೇಗದಿಂದ ಈಜುತ್ತಿದ್ದವು. ಅವು ಮುಂದಾಳುವಿನ ಹಿಂದೆ ಎಂಬ ಆಟವಾಡುತ್ತಿರುವಂತೆ ಕಾಣುತ್ತಿತ್ತು. ಈ ಸಮೂಹದಲ್ಲಿ ಯಾವ ಮೀನುಗಳಿಗೆ ಬೇಕೋ ಅವು ಮುಂದಾಳು ಆಗಬಹುದಿತ್ತು.




ಸಮೂಹ ಬಲಕ್ಕೆ ಹೊರಳಿದರೆ
ಬಲದಲ್ಲಿದ್ದ ಮೀನುಗಳು
ಮುಂದಾಳಾಗುತ್ತಿದ್ದವು.




ಸಮೂಹ ಎಡಕ್ಕೆ ಹೊರಳಿದರೆ
ಎಡದಲ್ಲಿದ್ದ ಮೀನುಗಳು
ಮುಂದಾಳಾಗುತ್ತಿದ್ದವು.






ಕೆಲವಾರು ಸಲ ಸಮೂಹಕ್ಕೆ ಸುತ್ತು ಹಾಕಬೇಕಾಗುತ್ತಿತ್ತು. ಆಗ ಹಿಂದೆ ಇದ್ದ ಮೀನುಗಳು ಮುಂದಾಳುತನ ವಹಿಸುತ್ತಿದ್ದವು.



ಮೀನುಗಳು ಆಹಾರಕ್ಕಾಗಿ ಬೇರೆ ಬೇರೆ ದಾರಿಗಳನ್ನು ಸುತ್ತು ಹಾಕಬೇಕಾಗಿತ್ತು. ಪ್ಲಾಂಕಟನ್ ಸಸ್ಯ ಕಂಡರೆ ಅವು ಅದನ್ನು ತಿನ್ನುತ್ತಿದ್ದವು.



ತಿನ್ನುವಾಗ ಅವು
ಸಮೂಹದಲ್ಲಿರುತ್ತಿರಲಿಲ್ಲ.
ಆದರೆ ಅವು ಒಬ್ಬರನ್ನು ಬಿಟ್ಟು
ದೂರ ಕೂಡ ಹೋಗುತ್ತಿರಲಿಲ್ಲ.





ತಿನ್ನುವದಾದ ಮೇಲೆ ಅವು ಮತ್ತೇ ಸಮೂಹವನ್ನು ಸೇರುತ್ತಿದ್ದವು. ಅವೆಲ್ಲ ಒಂದೇ ದಿಕ್ಕಿನಲ್ಲಿ ಈಜಾಡುತ್ತಿದ್ದವು. ಚಿಕ್ಕ ಹೆರಿಂಗ ಮೀನಿಗೆ ಇದು ತನ್ನ ಸಮೂಹವಲ್ಲ ಎಂಬುದರ ಅರಿವಾಯಿತು. ಅದಕ್ಕೆ ಅದು ಬೇಗನೆ ತಿಳಿಯಲಿಲ್ಲ. ಆದರೆ ಅವೆಲ್ಲ ಅದರ ಜಾತಿಯ ಮೀನುಗಳೇ ಎಂಬುದರ ಅರಿವಾಯಿತು.



ಸಮೂಹಕ್ಕೂ ಕೂಡ ಇದರಲ್ಲಿ ಯಾವ ಅಡ್ಡಿ ಇರಲಿಲ್ಲ. ಈ ಚಿಕ್ಕ ಮೀನು ಅವುಗಳಂತೆಯೇ ಕಾಣುತ್ತಿತ್ತು. ಸಮೂಹ ಇಡೀ ದಿವಸ ಈಜುವದರಲ್ಲಿ ಮತ್ತು ದಣಿವು ಆರಿಸುವದರಲ್ಲಿ ಕಳೆಯುತ್ತಿತ್ತು. ಸಂಜೆಯಲ್ಲಿ ಮತ್ತೇ ಆಹಾರ ಹುಡುಕಲು ಅಣಿ ವಾಗುತ್ತಿತ್ತು. ರಾತ್ರಿಯಾಗತೊಡಗಿತು. ಸಮುದ್ರದ ಮೇಲೆ ಕತ್ತಲೆ ಕವಿಯತೊಡಗಿತು.





ಮೀನುಗಳೆಲ್ಲ ಸುಮ್ಮನಾದವು.
ಅವುಗಳ ಕಣ್ಣುಗಳು ತೆರೆದಿದ್ದವು.
ಆದರೆ ಅವು ಮಲಗಿದ್ದವು. ಪುಟ್ಟ
ಹೆರಿಂಗ ಮೀನು ಕೂಡ
ಮಲಗಿತು.

ಸಮಾಪ್ತ

